ಪ್ರಜಾವಾಣಿ 30-12-2002

# ಜ.8ರಿಂದ 4 ದಿನ ವಿಜ್ಞಾನ-ಆಧ್ಯಾತ್ಮ ಕುರಿತ ವಿಚಾರಗೋಷ್ಠಿ

ಬೆಂಗಳೂರು. ಡಿ. 29 – ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್ ಮತ್ತು ಜಾನ್ ಟೆಂಪ್ಲೆಟನ್ ಪ್ರತಿಷ್ಠಾನಗಳ ಸಂಯುಕ್ತ ಆಶ್ರಯದಲ್ಲಿ 'ವಿಜ್ಞಾನ ಮತ್ತು ಆಧ್ಯಾತ್ಮಿಕ ಅನ್ವೇಷಣೆ – ವಿಜ್ಞಾನ ಮತ್ತು ತದನಂತರ: ಭಾರತೀಯ ಸಂಪ್ರದಾಯದಲ್ಲಿ ವಿಶ್ವವಿಜ್ಞಾನ. ತಂತ್ರಶಾಸ್ತ್ರ' ಕುರಿತ ಅಂತರರಾಷ್ಟ್ರೀಯ ವಿಚಾರಗೋಷ್ಠಿಯನ್ನು ಜ. 8ರಿಂದ 11 ರವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ಎನ್‌ಐಎಎಸ್ ನಿರ್ದೇಶಕ ಆರ್. ನರಸಿಂಹ ತಿಳಿಸಿದರು.

ಭಾರತೀಯ ವಿಜ್ಞಾನ ಸಂಸ್ಥೆ ಆವರಣದಲ್ಲಿ ನಡೆಯಲಿರುವ ಈ ವಿಚಾರಗೋಷ್ಠಿಯನ್ನು ರಾಜ್ಯ ಸಭಾ ಸದಸ್ಯ ಡಾ. ಕರಣ್ ಸಿಂಗ್ ಉದ್ಘಾಟಿಸುವರು.

ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅಧ್ಯಕ್ಷೀಯ ಭಾಷಣ ಮಾಡುವರು. ಮುಖ್ಯ ಭಾಷಣವನ್ನು ಇನ್‌ಫೋಸಿಸ್ ಅಧ್ಯಕ್ಷ ಎನ್.ಆರ್. ನಾರಾಯಣ ಮೂರ್ತಿ. ಸೊನೋಮ ವಿಶ್ವವಿದ್ಯಾಲಯದ ಫಿಲಿಪ್ ಕ್ಲೇಟನ್ ಮಾಡುವರು. ವಿಶೇಷ ಅತಿಥಿಗಳಾಗಿ ನಿವೃತ್ತ ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸ ರಾವ್ ಆಗಮಿಸುವರು ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ನಾಲ್ಕು ದಿನಗಳವರೆಗೆ ನಡೆಯುವ ಈ ವಿಚಾರಗೋಷ್ಠಿಯಲ್ಲಿ ದೇಶ. ವಿದೇಶಗಳಿಂದ ವಿಜ್ಞಾನಿಗಳು, ಪರಿಣಿತರು ಆಗಮಿಸಿ 'ಕ್ಲೋನಿಂಗ್. ತಂತ್ರಜ್ಞಾನ. ಸಮಾಜ ಮತ್ತು ಮೌಲ್ಯಗಳು. ವಿಜ್ಞಾನ. ಧರ್ಮ ಮತ್ತು ಸಾಮರಸ್ಯ' ಮುಂತಾದ ವಿಷಯಗಳ ಮೇಲೆ ಉಪನ್ಯಾಸ ನೀಡುವರು.

ಈ ವಿಚಾರಗೋಷ್ಠಿಯಲ್ಲಿ ಅಂತಿಮವಾಗಿ ತೆಗೆದುಕೊಂಡ ತೀರ್ಮಾನಗಳನ್ನು ಸರ್ಕಾರಕ್ಕೆ ಕಳುಹಿಸಲಾಗುವುದು ಎಂದು ಅವರು ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಟಾಮ್ ಮೆಕೆಂಝಿ. ಪ್ರೊ. ಬಿ.ವಿ. ಶ್ರೀಕಂಠನ್. ಡಾ. ಸಂಗೀತಾ ಮೆನನ್ ಉಪಸ್ಥಿತರಿದ್ದರು.